ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

**HUBLI ELECTRICITY SUPPLY COMPANY LIMITED**

(ಕರ್ನಾಟಕ ಸರ್ಕಾರದ ಸಂಪೂರ್ಣಸ್ವಾಮ್ಯಕ್ಕೆ ಒಳಪಟ್ಟಿದೆ)


ಸಹಾಯಕಕಾರ್ಯನಿರ್ವಾಹಕಇಂಜನೀಯರು(ವಿ)
ಕಾರ್ಯ& ಪಾಲನಾ ಉಪ ವಿಭಾಗ,
ಹು. ವಿ.ಸ.ಕಂ. ನಿ. ಕುಮಟಾರವರ ಕಛೇರಿ,
Phone No: 08386-222165, 224865

O/o,Assistant Executive Engineer (Ele),
O & M Sub Division
HESCOM, KUMTA.
Web-site : www.hescom.co.in
E-mail ID : aeekmt.hescom@gmail.com



**Corporate Identity Number (CIN): U31401KA2002SGC030437**


ಕ್ರಮಾಂಕ:ಕುಮಟಾ:ಸಕಾನಿಇ(ವಿ): 2020-21 3553-60    ದಿನಾಂಕ:23/11/2020 23/11/20

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಹೆಸ್ಕಾಂ ಉಪವಿಭಾಗ ಕುಮಟಾ ಕಛೇರಿಯಲ್ಲಿ ದಿನಾಂಕ 21.11.2020 ರಂದು ಗ್ರಾಹಕರ ಸಂವಾದ ಸಭೆಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಅಧ್ಯಕ್ಷತೆಯಲ್ಲಿ ನಡೆಸಲಾಯಿತು, ಸದರಿ ಸಭೆಯಲ್ಲಿ ಹಾಜರಾದ ಗ್ರಾಹಕರು ,ಕಂಪನಿಯ ಅಧಿಕಾರಿಗಳು ಹಾಗೂ ನೌಕರರು ಈ ಕೆಳಗೆ ವಿವರಿಸಲಾಗುತ್ತಿರುವ ಗ್ರಾಹಕರ ಕುಂದು ಕೊರತೆಯ ಕುರಿತು ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಠರಾಯಿಸಿರುವ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

ಗ್ರಾಹಕರು

1. ಶ್ರೀ ಜೋಗುದಾನಂದ ಪಟಗಾರ, ಹಿರೇಗುತ್ತಿ ಕುಮಟಾ
2. ಶ್ರೀ ಕೋಲಂಬಸ್ ಜೊಸೆಪ್ ದೋಣಿಹೊಳೆ, ಕುಮಟಾ
3. ಶ್ರೀ ವೆಂಕಟ್ರಮಣ ಎಸ್ ಭಟ್ಟ, ಕಂಡಗಾರ ಕುಮಟಾ
4. ಶ್ರೀ ವಿನೋದ ಶೆಟ್ಟಿ ಕುಮಟಾ

**ಉಪ ವಿಭಾಗೀಯ ಕಛೇರಿ ಅಧಿಕಾರಿ/ನೌಕರರು**

5. ಶ್ರೀ ಸಂಜೀವ ಕೆ ಗೌಡ, ಪ್ರಭಾರೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಕಾ ಮತ್ತು ಪಾ ಉಪ ವಿಭಾಗ ಹೆಸ್ಕಾಂ, ಕುಮಟಾ
6. ಶ್ರೀ. ಲೋಹಿತ್ ಎಲ್ ನಾಯ್ಕ, ಸಹಾಯಕ ಲೆಕ್ಕಾಧಿಕಾರಿ, ಹೆಸ್ಕಾಂ ಕುಮಟಾ
7. ಶ್ರೀ. ಹರೀಶ ಕಲ್ಲಾಪುರ, ಸಹಾಯಕ ಇಂಜಿನೀಯರ್(ವಿ),ಶಾಖಾಧಿಕಾರಿ ಗೋಕರ್ಣ ಶಾಖೆ
8. ಶ್ರೀ. ವಿಜಯ ಎನ್ ತೋಡುರ ಸಹಾಯಕ ಇಂಜಿನೀಯರ್(ವಿ),ಶಾಖಾಧಿಕಾರಿ ಪಟ್ಟಣ ಶಾಖೆ
9. ಶ್ರೀ ರಾಜು ಬಿ ಪ್ರಭಾರೆ ಶಾಖಾಧಿಕಾರಿಗಳು, ಮರಾಕಲ್ ಶಾಖೆ
10. ಶ್ರೀ. ಮಹೇಂದ್ರ ಎಮ್ ನಾಯ್ಕ ಕಿರಿಯ ಇಂಜಿನೀಯರ್ (ವಿ) (ಕಾಮಗಾರಿ ಘಟಕ)
11. ಶ್ರೀ. ಹೆಚ್.ಎನ್.ಕುಲಕರ್ಣಿ, ಪ್ರಭಾರೆ ಶಾಖಾಧಿಕಾರಿ ಗ್ರಾಮೀಣ ಶಾಖೆ.2
12. ಶ್ರೀ ಸತೀಶ ಕೆ ಗೌಡ ಪ್ರಭಾರೆ ಶಾಖಾಧಿಕಾರಿ ಗ್ರಾಮೀಣ ಶಾಖೆ.1

**ಚರ್ಚಿಸಿ ಠರಾಯಿಸಿರುವ ವಿಷಯಗಳು:**

1. ಶ್ರೀ ಕೋಲಂಬಸ್ ಜೋಸೆಪ್ ಇವರು ದೋಣಿಹಾಳದಲ್ಲಿ 3 ಫೇಸ್ ಕನೆಕ್ಷನ್ ಹಾಳಾಗಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ)ರವರು ಶಾಖಾಧಿಕಾರಿಗಳು, ಮರಾಕಲ್ ಶಾಖೆ ರವರಿಗೆ ಸ್ಥಳ ಪರಿಶೀಲಿಸಿ ಟ್ರಾನ್ಸಫಾರ್ಮರ್ ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

( ಶಾಖಾಧಿಕಾರಿಗಳು, ಮರಾಕಲ್ ಶಾಖೆ ಸದರಿ ವಿಷಯದ ಕುರಿತು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸುವುದು.)

2. ಶ್ರೀ ವೆಂಕಟ್ರಮಣ ಎಸ್ ಭಟ್ಟ, ಕಂಡಗಾರ ಕುಮಟಾ ಇವರು ಕಂಡಗಾರದಲ್ಲಿಯ ಟ್ರಾನ್ಸಫಾರ್ಮರ್‌ನಲ್ಲಿ ದೋಷವಿರುವ ಬಗ್ಗೆ ಹಾಗೂ ವಾಹಕ ಬದಲಾಯಿಸಲು ಸಭೆಯ ಗಮನಕ್ಕೆ ತಂದರು. ಅದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ)ರವರು ಶಾಖಾಧಿಕಾರಿಗಳು, ಗ್ರಾಮೀಣ ಶಾಖೆ 2 ರವರಿಗೆ ಟ್ರಾನ್ಸ್‌ಫಾರ್ಮರ್‌ನ್ನು ಪರಿಶೀಲಿಸಿ ಅಂದಾಜು ಪತ್ರಿಕೆಯನ್ನು ತಯಾರಿಸಲು ಸೂಚಿಸಿದರು.
(ಶಾಖಾಧಿಕಾರಿಗಳು, ಗ್ರಾಮೀಣ ಶಾಖೆ 2 ಸದರಿ ವಿಷಯದ ಕುರಿತು ಟ್ರಾನ್ಸ್‌ಫಾರ್ಮರ್ ಪರಿಶೀಲಿಸಿ ಅಂದಾಜು ಪತ್ರಿಕೆ ಸಲ್ಲಿಸಲು ಕ್ರಮ ಜರುಗಿಸುವುದು.)

3. ಜೋಗುದಾನಂದ ಪಟಗಾರ, ಹಿರೇಗುತ್ತಿ ಇವರು ಬಿಲ್ ತುಂಬಿದ ಮೊತ್ತವು ಸೇರಿ ಬಂದಿರುವ ಕುರಿತು ಸಭೆಯಲ್ಲಿ ತಿಳಿಸಿದರು ಅದಕ್ಕೆ ಸಹಾಯಕ ಲೆಕ್ಕಾಧಿಕಾರಿಗಳು ಬಿಲ್ ಪರಿಶೀಲಿಸಿ ಹಿಂದಿನ ತಿಂಗಳ ಬಿಲ್ಲನ್ನು ತಡವಾಗಿ ಪಾವತಿಸಿರುವುದರಿಂದ ಸೇರಿ ಬಂದಿರುವುದಾಗಿ ಗ್ರಾಹಕರಿಗೆ ತಿಳಿಸಿ ಹೇಳಿದರು.

ಅಂತಿಮವಾಗಿ ಗ್ರಾಹಕರಿಗೆ ವಂದನೆಗಳನ್ನು ಅರ್ಪಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರು(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ
ಹು.ವಿ.ಸ.ಕಂ.ನಿ.ಕುಮಟಾ

<u>ಪ್ರತಿಯನ್ನು</u>

1. ಅಧೀಕ್ಷಕ ಇಂಜಿನೀಯರ್(ವಿ)ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ, ಹೆಸ್ಕಾಂ, ಅಯ್ಯಪ್ಪ ನಗರ, ಸಿರ್ಸಿ ರವರಿಗೆ ಮಾಹಿತಿಗಾಗಿ ಹಾಗೂ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನೀಯರ್ (ವಿ) ಕಾರ್ಯ ಮತ್ತು ಪಾಲನಾ ವಿಭಾಗ ಹೆಸ್ಕಾಂ,ಪ್ರಭಾತ ನಗರ,ಹೊನ್ನಾವರ ಇವರಿಗೆ ಮಾಹಿತಿಗಾಗಿ ಹಾಗೂ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ಸಹಾಯಕ ಇಂಜಿನೀಯರ್(ತಾಂ)/,ಶಾಖಾಧಿಕಾರಿಗಳು ನಗರ ಶಾಖೆ/ ಗ್ರಾಮೀಣ 1/ ಗ್ರಾಮೀಣ 2 /ಮರಾಕಲ್ ಹಾಗೂ ಗೋಕರ್ಣ ಶಾಖೆ/ಸಲೆಅ/ಹಿಸ/ಕಡತ